**All India Radio: Bangalore**
**National Bulletin In Kannada**
**08.09.2026 07.35 a.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**08.09.2026 07.35 a.m.**
*******************

ಮುಖ್ಯಾಂಶಗಳು

೧. ಗುಜರಾತ್, ಮಹಾರಾಷ್ಟ್ರಕ್ಕೆ ಇಂದು ಪ್ರಧಾನಿ ನರೇಂದ್ರ ಮೋದಿ ಭೇಟಿ: ವಡೋದರಾದಲ್ಲಿ ೩೫ ಸಾವಿರ ಕೋಟಿ ರೂಪಾಯಿ ವೆಚ್ಚದ ಯೋಜನೆಗಳ ಚಾಲನೆ

೨. ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಭಾರತದ ಖಾಯಂ ಸದಸ್ಯತ್ವಕ್ಕೆ ಲಕ್ಸನ್‌ಬರ್ಗ್ ಬೆಂಬಲ

೩. ಮುಂದಿನ ಪೀಳಿಗೆಯ ೬ಜಿ ಜಾಲ ವಿಸ್ತರಣೆ; ಅಮೆರಿಕ ನೇತೃತ್ವದ ಅಂತಾರಾಷ್ಟ್ರೀಯ ಉಪಕ್ರಮಕ್ಕೆ ಭಾರತ ಸೇರ್ಪಡೆ

೪. ವಿಶ್ವ ಪ್ಯಾರಾ ಬಿಲ್ಲುಗಾರಿಕೆ ಸರಣಿ: ನಾಲ್ಕು ಫೈನಲ್‌ಗಳಲ್ಲಿ ಇಂದು ಭಾರತೀಯ ಪ್ಯಾರಾ ಬಿಲ್ಲುಗಾರರು ಸ್ಪರ್ಧೆ

೫. ಐಟಿಎಫ್ ಪುರುಷರ ವರ್ಲ್ಡ್ ಟೂರ್ ಎಂ-೧೫ ಟೆನಿಸ್; ಭಾರತದ ಕರಣ್ ಸಿಂಗ್‌ಗೆ ಪುರುಷರ ಸಿಂಗಲ್ಸ್ ಪ್ರಶಸ್ತಿ

***************

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದು ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಭೇಟಿ ನೀಡುತ್ತಿದ್ದಾರೆ.

ವಡೋದರಾದಲ್ಲಿ ೩೫ ಸಾವಿರ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಅಭಿವೃದ್ಧಿ ಕಾಮಗಾರಿಗಳಿಗೆ ಅವರು ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಲಿದ್ದಾರೆ. ಇದರಲ್ಲಿ ೨೦ ಸಾವಿರದ ೭೦೦ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ 'ಪಶ್ಚಿಮ ಮೀಸಲಾದ ಸರಕು ಸಾಗಣೆ ಕಾರಿಡಾರ್'ನ ಪೂರ್ಣಗೊಂಡ ಭಾಗಗಳನ್ನು ಅವರು ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಈ ಬೃಹತ್ ಯೋಜನೆಯ ಪೂರ್ಣಗೊಳ್ಳುವಿಕೆ ಕುರಿತು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸಂತಸ ವ್ಯಕ್ತಪಡಿಸಿದ್ದಾರೆ.

ಇದರ ಜೊತೆಗೆ ವಿವಿಧ ಸರಕು ಹಾಗೂ ಹೊಸ ಪ್ರಯಾಣಿಕ ರೈಲು ಸೇವೆಗಳಿಗೆ ಪ್ರಧಾನಿ ಚಾಲನೆ ನೀಡಲಿದ್ದು, ಅಲಿರಾಜ್‌ಪುರದ ಗಿರಿಜನ ಪ್ರದೇಶಗಳನ್ನು ರೈಲು ಜಾಲಕ್ಕೆ ಜೋಡಿಸುವ ಜೋಬತ್-ತಾಂಡಾ ರಸ್ತೆ ಹೊಸ ಮಾರ್ಗವನ್ನು ಉದ್ಘಾಟಿಸಲಿದ್ದಾರೆ. ಇದರ ಜೊತೆಗೆ ೯ ಸಾವಿರದ ೭೦೦ ಕೋಟಿ ರೂಪಾಯಿ ಮೌಲ್ಯದ ರೈಲ್ವೆ ಯೋಜನೆಗಳು, ೧ ಸಾವಿರದ ೭೮೦ ಕೋಟಿ ರೂಪಾಯಿ ವೆಚ್ಚದ ರಾಷ್ಟ್ರೀಯ ಹೆದ್ದಾರಿ ಯೋಜನೆಗಳು ಹಾಗೂ ಗುಜರಾತ್ ಸರ್ಕಾರದ ೨ ಸಾವಿರದ ೬೦೦ ಕೋಟಿ ರೂಪಾಯಿ ಮೌಲ್ಯದ ವಿವಿಧ ಯೋಜನೆಗಳಿಗೆ ಚಾಲನೆ ದೊರೆಯಲಿದೆ.

ಸಂಜೆ ಮುಂಬೈಗೆ ತೆರಳಲಿರುವ ಪ್ರಧಾನಮಂತ್ರಿಯವರು, ಇದೇ ೧೧ ರವರೆಗೆ ನಡೆಯಲಿರುವ ೭ನೇ ಆವೃತ್ತಿಯ 'ಗ್ಲೋಬಲ್ ಫಿನ್ ಟೆಕ್ ಫೆಸ್ಟ್ ೨೦೨೬' ಅನ್ನು ಉದ್ಘಾಟಿಸಿ ಮಾತನಾಡಲಿದ್ದಾರೆ. ಈ ಸಮ್ಮೇಳನದಲ್ಲಿ ಕೃತಕ ಬುದ್ಧಿಮತ್ತೆ ಹಾಗೂ ಕ್ವಾಂಟಮ್ ತಂತ್ರಜ್ಞಾನಗಳ ಮೂಲಕ ಡಿಜಿಟಲ್ ಹಣಕಾಸು ವ್ಯವಸ್ಥೆಯನ್ನು ಸಕ್ಷಮಗೊಳಿಸುವ ಕುರಿತು ಚರ್ಚೆಗಳು ನಡೆಯಲಿವೆ.

***************

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ನೀಡುವ ಪ್ರಸ್ತಾಪಕ್ಕೆ ಲಕ್ಸಂಬರ್ಗ್ ಉಪಪ್ರಧಾನಿ ಹಾಗೂ ವಿದೇಶಾಂಗ ಸಚಿವ ಕ್ಸೇವಿಯರ್ ಬೆಟ್ಟೆಲ್ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದಾರೆ. ಪ್ರಸ್ತುತ ಜಾಗತಿಕ ವ್ಯವಸ್ಥೆಯ ನೈಜ ಸ್ಥಿತಿಯನ್ನು ಪ್ರತಿಬಿಂಬಿಸಲು ಭದ್ರತಾ ಮಂಡಳಿಯ ಪುನರ್‌ರಚನೆ ಅತ್ಯಗತ್ಯ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಸುದ್ದಿಸಂಸ್ಥೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಕ್ಸೇವಿಯರ್ ಬೆಟ್ಟೆಲ್, ಭಾರತದ ಬೃಹತ್ ವಿಸ್ತೀರ್ಣ ಹಾಗೂ ಜಾಗತಿಕ ಮಟ್ಟದಲ್ಲಿ ಅದರ ಪ್ರಾಮುಖ್ಯತೆಯನ್ನು ಪರಿಗಣಿಸಿ, ಭದ್ರತಾ ಮಂಡಳಿಯಲ್ಲಿ ಭಾರತವನ್ನು ಸೇರ್ಪಡೆಗೊಳಿಸುವುದು ಅಗತ್ಯವಾಗಿದೆ ಎಂದಿದ್ದಾರೆ. ಪ್ರಸ್ತುತ ಖಾಯಂ ಸದಸ್ಯತ್ವ ಹೊಂದಿರದ ಭಾರತ ಹಾಗೂ ಬ್ರೆಜಿಲ್‌ನಂತಹ ಪ್ರಮುಖ ದೇಶಗಳನ್ನು ಒಳಗೊಳ್ಳುವ ಮೂಲಕ ಯುಎನ್‌ಎಸ್‌ಸಿ ಅನ್ನು ವಿಸ್ತರಿಸಬೇಕು ಎಂದು ಅವರು ಪ್ರತಿಪಾದಿಸಿದ್ದಾರೆ.

***************

ಅಮೆರಿಕ ಸೇರಿದಂತೆ ೨೪ ರಾಷ್ಟ್ರಗಳೊಂದಿಗೆ ಮುಂದಿನ ಪೀಳಿಗೆಯ ೬ಜಿ ಜಾಲಗಳ ಅಭಿವೃದ್ಧಿಗೆ ರೂಪುರೇಷೆ ಸಿದ್ಧಪಡಿಸುವ ಉದ್ದೇಶದ ಅಂತಾರಾಷ್ಟ್ರೀಯ ಉಪಕ್ರಮಕ್ಕೆ ಭಾರತವು ಸೇರ್ಪಡೆಯಾಗಿದೆ.

ಮುಂದಿನ ಪೀಳಿಗೆಯ ಜಾಲಗಳು ಪರಸ್ಪರ ಹಂಚಿಕೊಂಡಿರುವ ಭದ್ರತಾ ಹಿತಾಸಕ್ತಿಗಳನ್ನು ಪ್ರತಿಬಿಂಬಿಸುವಂತೆ, ಸ್ಪರ್ಧಾತ್ಮಕತೆಯನ್ನು ಬಲಪಡಿಸುವಂತೆ ಹಾಗೂ ನಾವೀನ್ಯತೆಗೆ ಉತ್ತೇಜನ ನೀಡುವಂತೆ ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಭಾರತವು ಅಮೆರಿಕ ಸೇರಿದಂತೆ ೨೪ ರಾಷ್ಟ್ರಗಳೊಂದಿಗೆ ಕೈಜೋಡಿಸಿದೆ ಎಂದು ಅಮೆರಿಕದ ವಾಣಿಜ್ಯ ಇಲಾಖೆ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದೆ.

***************

ಅಸ್ಸಾಂನ ನಗಾಂವ್ ಲೋಕಸಭಾ ಕ್ಷೇತ್ರಕ್ಕೆ ಉಪಚುನಾವಣೆ ಘೋಷಿಸಲಾಗಿದೆ. ತಮಿಳುನಾಡು ಮತ್ತು ಪಶ್ಚಿಮ ಬಂಗಾಳದ ತಲಾ ೨ ವಿಧಾನಸಭಾ ಕ್ಷೇತ್ರಗಳು ಹಾಗೂ ಪುದುಚೇರಿಯ ೧ ವಿಧಾನಸಭಾ ಕ್ಷೇತ್ರಕ್ಕೂ ಉಪಚುನಾವಣೆ ನಡೆಯಲಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ತಮಿಳುನಾಡಿನ ಮಧುರಾಂತಕಂ ಮತ್ತು ಧಾರಾಪುರಂ, ಪಶ್ಚಿಮ ಬಂಗಾಳದ ರೇಜಿನಗರ ಮತ್ತು ನಂದಿಗ್ರಾಮ ಹಾಗೂ ಪುದುಚೇರಿಯ ತಟ್ಟಾಂಚಾವಡಿ ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ.

ಲೋಕಸಭೆ ಮತ್ತು ವಿಧಾನಸಭಾ ಉಪಚುನಾವಣೆಗಳಿಗೆ ಅಧಿಸೂಚನೆ ನಾಳೆ ಹೊರಡಿಸಲಾಗುವುದು ಎಂದು ಚುನಾವಣಾ ಆಯೋಗ ತಿಳಿಸಿದೆ.

ಈ ತಿಂಗಳ ೧೬ರವರೆಗೆ ನಾಮಪತ್ರ ಸಲ್ಲಿಸಬಹುದು. ಅಕ್ಟೋಬರ್ ೬ರಂದು ಮತದಾನ ನಡೆಯಲಿದ್ದು, ಅಕ್ಟೋಬರ್ ೯ರಂದು ಮತ ಎಣಿಕೆ ನಡೆಯಲಿದೆ.

***************

ನಗರ ಮತ್ತು ಗ್ರಾಮೀಣ ಪ್ರದೇಶಗಳ ಎಲ್ಲಾ ಗೃಹಬಳಕೆಯ ಎಲ್‌ಪಿಜಿ ಗ್ರಾಹಕರು ಇನ್ನು ಮುಂದೆ ೨೫ ದಿನಗಳ ಅಂತರದಲ್ಲಿ ಸಿಲಿಂಡರ್ ಮರುಪೂರಣ ಬುಕ್ ಮಾಡಬಹುದು ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ರಾಜ್ಯ ಸಚಿವ ಸುರೇಶ್ ಗೋಪಿ ತಿಳಿಸಿದ್ದಾರೆ.

ಎಲ್‌ಪಿಜಿ ಪೂರೈಕೆ ಪರಿಸ್ಥಿತಿ ಸುಧಾರಣೆ ಹಾಗೂ ಬಾಕಿ ಇರುವ ಬೇಡಿಕೆಯಲ್ಲಿ ಇಳಿಕೆಯಾಗಿರುವ ಹಿನ್ನೆಲೆಯಲ್ಲಿ ಈ ನಿರ್ಬಂಧವನ್ನು ಸಡಿಲಿಸಲಾಗಿದೆ. ತೈಲ ಮಾರುಕಟ್ಟೆ ಕಂಪನಿಗಳು ತಕ್ಷಣದಿಂದಲೇ ಪರಿಷ್ಕೃತ ೨೫ ದಿನಗಳ ಅವಧಿಯನ್ನು ಏಕರೂಪವಾಗಿ ಜಾರಿಗೊಳಿಸುವಂತೆ ಕೇಂದ್ರ ಸರ್ಕಾರ ಸೂಚಿಸಿದೆ.

***************

ಭಾರತೀಯ ನೌಕಾಪಡೆಯ ತರಬೇತಿ ನೌಕೆ ಐಎನ್‌ಎಸ್ ಸುದರ್ಶಿನಿ, ಲೋಕಾಯನ್ ೨೬ ಯಾತ್ರೆಯ ಅಂಗವಾಗಿ ಸ್ಪೇನ್‌ನ ಬಾರ್ಸಿಲೋನಾದಲ್ಲಿ ನಡೆಸಿದ್ದ ಬಂದರು ಭೇಟಿಯನ್ನು ಪೂರ್ಣಗೊಳಿಸಿದೆ.

ಭೇಟಿಯ ವೇಳೆ ನೌಕೆಯ ಕಮಾಂಡಿಂಗ್ ಅಧಿಕಾರಿ ಸ್ಪೇನ್ ನೌಕಾಪಡೆ ಹಾಗೂ ಸಮುದ್ರಯಾನ ಪ್ರಾಧಿಕಾರದ ಹಿರಿಯ ಅಧಿಕಾರಿಗಳೊಂದಿಗೆ ವಿಚಾರ ವಿನಿಮಯ ನಡೆಸಿದರು. ಭಾರತೀಯ ಮೂಲದವರು ಹಾಗೂ ಸ್ಥಳೀಯರು ನೌಕೆಗೆ ಭೇಟಿ ನೀಡಿ ಸಿಬ್ಬಂದಿ ಮತ್ತು ತರಬೇತಿದಾರರೊಂದಿಗೆ ಸಂವಾದ ನಡೆಸಲು ಅವಕಾಶ ಕಲ್ಪಿಸಲಾಗಿತ್ತು.

ಭಾರತ ಮತ್ತು ಸ್ಪೇನ್ ನಡುವಿನ ದೀರ್ಘಕಾಲದ ಸಮುದ್ರಯಾನ ಸಂಬಂಧವನ್ನು ಈ ಭೇಟಿ ಮತ್ತಷ್ಟು ಬಲಪಡಿಸಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

***************

ಗೋವಾದ ಪಣಜಿಯಲ್ಲಿ ಪಶ್ಚಿಮ ವಲಯ ಮಂಡಳಿಯ ೨೮ನೇ ಸಭೆಯ ಅಧ್ಯಕ್ಷತೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ವಹಿಸಿದ್ದರು. ಪಶ್ಚಿಮ ವಲಯದ ರಾಜ್ಯಗಳ ನಡುವೆ ಇದೀಗ ಯಾವುದೇ ವಿವಾದಗಳಿಲ್ಲ ಎಂದು ಅವರು ಹೇಳಿದರು. ರಾಜ್ಯಗಳ ನಡುವಿನ ನದಿ ವಿವಾದಗಳೂ ಸೇರಿದಂತೆ ಹಲವು ಸಮಸ್ಯೆಗಳನ್ನು ವಲಯ ಮಂಡಳಿಯ ಮೂಲಕ ಪರಿಹರಿಸಲಾಗಿದೆ ಎಂದು ತಿಳಿಸಿದರು.

ಗೋವಾ, ಗುಜರಾತ್ ಮತ್ತು ಮಹಾರಾಷ್ಟ್ರ ಮುಖ್ಯಮಂತ್ರಿಗಳು ಹಾಗೂ ದಾದ್ರಾ ಮತ್ತು ನಗರ ಹವೇಲಿ ಮತ್ತು ದಮನ್ ಮತ್ತು ದಿಯು ಆಡಳಿತಾಧಿಕಾರಿ ಸಭೆಯಲ್ಲಿ ಉಪಸ್ಥಿತರಿದ್ದರು.

ಇದೇ ವೇಳೆ, ತಲೇಗಾಂವ್‌ನಲ್ಲಿ ನಡೆದ ಸಮಾರಂಭದಲ್ಲಿ ಅಮಿತ್ ಶಾ ಅವರು ಗೋವಾ ಪೊಲೀಸರಿಗೆ ಪ್ರತಿಷ್ಠಿತ ರಾಷ್ಟ್ರಪತಿ ಪೊಲೀಸ್ ಬಣ್ಣ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

***************

ಅಹಮದಾಬಾದ್‌ನಲ್ಲಿ ನಡೆಯುತ್ತಿರುವ ವಿಶ್ವ ಪ್ಯಾರಾ ಬಿಲ್ಲುಗಾರಿಕೆ ಸರಣಿಯಲ್ಲಿ ಸ್ವದೇಶಿ ಅಂಗಳದ ಲಾಭ ಪಡೆಯಲು ಸಜ್ಜಾಗಿರುವ ಭಾರತೀಯ ಪ್ಯಾರಾ ಆರ್ಚರ್‌ಗಳು ಇಂದು ನಾಲ್ಕು ಚಿನ್ನದ ಪದಕಗಳ ಫೈನಲ್ ಪಂದ್ಯಗಳಲ್ಲಿ ಸ್ಪರ್ಧಿಸಲಿದ್ದಾರೆ.

ಪ್ಯಾರಾ ರಿಕರ್ವ್ ಮಹಿಳೆಯರ ತಂಡ ವಿಭಾಗದ ಚಿನ್ನದ ಪದಕಕ್ಕಾಗಿ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಭಾರತದ ಭಾವನಾ ಮತ್ತು ಪೂಜಾ ಜೋಡಿಯು ಚೀನಾದ ಲಿಯಾಂಗ್ ಕಿಯುರಾಂಗ್ ಮತ್ತು ಚೆನ್ ಯು ಜೋಡಿಯನ್ನು ಎದುರಿಸಲಿದ್ದು, ತವರು ನೆಲದಲ್ಲಿ ಅಗ್ರಸ್ಥಾನ ಗಳಿಸುವ ಗುರಿ ಹೊಂದಿದೆ.

ಇನ್ನು ಪ್ಯಾರಾ ರಿಕರ್ವ್ ಪುರುಷರ ತಂಡ ವಿಭಾಗದ ಫೈನಲ್‌ನಲ್ಲಿ ಭಾರತದ ಹರ್ವಿಂದರ್ ಸಿಂಗ್ ಮತ್ತು ವಿಜಯ್ ಸುಂಡಿ ಜೋಡಿಯು ಸ್ಲೊವಾಕಿಯಾದ ಡೇವಿಡ್ ಇವಾನ್ ಮತ್ತು ಡೆನಿಸ್ ಇವಾನ್ ವಿರುದ್ಧ ಚಿನ್ನದ ಪದಕಕ್ಕಾಗಿ ಸೆಣಸಲಿದೆ.

ಪ್ಯಾರಾ ಕಾಂಪೌಂಡ್ ಪುರುಷರ ತಂಡ ವಿಭಾಗದ ಫೈನಲ್‌ನಲ್ಲೂ ಭಾರತದ ಶ್ಯಾಮ್ ಸುಂದರ್ ಸ್ವಾಮಿ ಮತ್ತು ತೋಮನ್ ಕುಮಾರ್ ಜೋಡಿಯು ಇರಾಕ್‌ನ ಜೋಡಿಯನ್ನು ಮುಖಾಮುಖಿಯಾಗಲಿದೆ. ಇದರ ಜೊತೆಗೆ ಮಿಶ್ರ ತಂಡ  ಡಬ್ಲ್ಯೂ-೧ ಫೈನಲ್‌ನಲ್ಲಿ ಭಾರತದ ಸ್ವಾತಿ ಚೌಧರಿ ಮತ್ತು ಆದಿಲ್ ಮೊಹಮ್ಮದ್ ನಜೀರ್ ಅನ್ಸಾರಿ ಜೋಡಿಯು ಚೆಕ್ ಗಣರಾಜ್ಯದ ತಂಡದ ವಿರುದ್ಧ ಸ್ಪರ್ಧಿಸಲಿದೆ.

***************

ಇಂಡೋನೇಷ್ಯಾದ ಬಾಲಿಯಲ್ಲಿ ನಡೆದ ಐಟಿಎಫ್ ಪುರುಷರ ವರ್ಲ್ಡ್ ಟೂರ್ ಎಂ-೧೫ ಟೆನಿಸ್ ಪಂದ್ಯಾವಳಿಯಲ್ಲಿ ಭಾರತದ ಕರಣ್ ಸಿಂಗ್ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದಿದ್ದಾರೆ. ಫೈನಲ್‌ನಲ್ಲಿ ನ್ಯೂಜಿಲೆಂಡ್‌ನ ಐದನೇ ಶ್ರೇಯಾಂಕದ ಐಸಾಕ್ ಬೆಕ್ರಾಫ್ಟ್ ಅವರನ್ನು ೭-೫, ೭-೬ ಅಂತರದಿಂದ ಮಣಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಇದು ಕರಣ್ ಸಿಂಗ್ ಅವರ ವೃತ್ತಿಜೀವನದ ನಾಲ್ಕನೇ ಪ್ರಶಸ್ತಿ ಹಾಗೂ ೨೦೨೬ರ ಮೂರನೇ ಪ್ರಶಸ್ತಿಯಾಗಿದೆ. ೨೦೨೬ರ ಸಾಲಿನಲ್ಲಿ ಸಿಂಗಲ್ಸ್ ವಿಭಾಗದಲ್ಲಿ ಅವರು ಗೆದ್ದಿರುವ ಎರಡನೇ ಪ್ರಶಸ್ತಿ ಇದಾಗಿದೆ.

ಹರಿಯಾಣದ ಕರ್ನಾಲ್ ಮೂಲದ ಕರಣ್ ಸಿಂಗ್, ಇಂಡೋನೇಷ್ಯಾ ಪ್ರಶಸ್ತಿಗೂ ಕೆಲವೇ ವಾರಗಳ ಹಿಂದೆ ಕಜಕಿಸ್ತಾನದ ಅಸ್ತಾನಾದಲ್ಲಿ ನಡೆದ ಐಟಿಎಫ್ ಎಂ-೧೫ ಟೂರ್ನಿಯಲ್ಲಿ ಡಬಲ್ಸ್ ಪ್ರಶಸ್ತಿ ಗೆದ್ದಿದ್ದರು.

***************

ಮುಂಬರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಇರಾನ್ ಅಧ್ಯಕ್ಷ ಮಸೌದ್ ಪೆಝೆಶ್ಕಿಯಾನ್ ನವದೆಹಲಿಗೆ ಭೇಟಿ ನೀಡಲಿರುವ ಹಿನ್ನೆಲೆಯಲ್ಲಿ, ಭಾರತದ ಮಹತ್ವದ ರಾಜತಾಂತ್ರಿಕ ಪಾತ್ರವನ್ನು ಇರಾನ್ ಶ್ಲಾಘಿಸಿದೆ. ಈ ಜಾಗತಿಕ ಒಕ್ಕೂಟವು ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರ ಮತ್ತು ಆಯಕಟ್ಟಿನ ರಾಜತಾಂತ್ರಿಕ ಸಹಕಾರವನ್ನು ಮತ್ತಷ್ಟು ಬಲಪಡಿಸಲು ಪ್ರಬಲ ವೇದಿಕೆಯಾಗಲಿದೆ ಎಂದು ಇರಾನ್ ವಿಶ್ವಾಸ ವ್ಯಕ್ತಪಡಿಸಿದೆ.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಘಾಯಿ, ಭಾರತದೊಂದಿಗೆ ಹೊಂದಿರುವ ಸುದೀರ್ಘ ಹಾಗೂ ಸಾಂಪ್ರದಾಯಿಕ ಬಾಂಧವ್ಯಕ್ಕೆ ಇರಾನ್ ನೀಡಿರುವ ಪ್ರಾಮುಖ್ಯತೆಯನ್ನು ಪುನರುಚ್ಚರಿಸಿದರು.

ಇದೇ ೧೭ ಮತ್ತು ೧೮ ರಂದು ನವದೆಹಲಿಯಲ್ಲಿ ನಡೆಯಲಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಅಧ್ಯಕ್ಷ ಪೆಝೆಶ್ಕಿಯಾನ್ ಅವರು ಭಾಗವಹಿಸುತ್ತಿದ್ದು, ಈ ಬಹುಪಕ್ಷೀಯ ರಾಜತಾಂತ್ರಿಕ ಸಮಾಲೋಚನೆಯು ಭಾರತ ಮತ್ತು ಇರಾನ್ ನಡುವಿನ ದ್ವಿಪಕ್ಷೀಯ ಬಾಂಧವ್ಯದ ಪ್ರಗತಿಯನ್ನು ಮತ್ತಷ್ಟು ವೇಗಗೊಳಿಸಲಿದೆ ಎಂದು ಎಸ್ಮಾಯಿಲ್ ಬಘಾಯಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

******** ಮುಕ್ತಾಯ *******